ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಪಟ್ಟಿ–೦೧

ಒಟ್ಟು ಪ್ರಶ್ನೆಗಳು – ೧೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಮೂರನೆಯ ಅಧಿವೇಶನ

## (ಮುಂದುವರೆದ ಉಪವೇಶನಗಳು)

## ಗುರುವಾರ, ದಿನಾಂಕ: ೦೪ನೇ ಮಾರ್ಚ್, ೨೦೨೧

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

೩. ಸಣ್ಣ ನೀರಾವರಿ ಸಚಿವರು

೪. ಜಲ ಸಂಪನ್ಮೂಲ ಸಚಿವರು

೫. ಅಬಕಾರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು

---

## ಕಲಬುರಗಿ ಜಿಲ್ಲೆಯಲ್ಲಿನ ಕಳ್ಳತನದ ಪ್ರಕರಣಗಳ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೯೧ (೬೨೪) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಕಳೆದ ೦೩ ವರ್ಷಗಳಲ್ಲಿ ನಡೆದಿರುವ ಕಳ್ಳತನದ ಪ್ರಕರಣಗಳೆಷ್ಟು; ಅವು ಯಾವುವು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಳ್ಳರನ್ನು ಪತ್ತೆ ಹಚ್ಚಲಾಗಿದೆ ಹಾಗೂ ಬಂಧಿಸಲಾಗಿದೆ; ಎಷ್ಟು ಪ್ರಕರಣಗಳಲ್ಲಿ ಕಳ್ಳತನ ಮಾಡಿದ ವಸ್ತುಗಳನ್ನು ಹಿಂದಿರುಗಿಸಲಾಗಿದೆ;

(ಇ) ಹಲವು ತಿಂಗಳುಗಳು ಕಳೆದರೂ ಕಳ್ಳರನ್ನು ಪತ್ತೆ ಹಚ್ಚದಿರಲು ಕಾರಣಗಳೇನು; ಎಷ್ಟು ದಿನಗಳಲ್ಲಿ ಪತ್ತೆ ಹಚ್ಚಲಾಗುವುದು;

(ಈ) ಕರ್ನಾಟಕದಲ್ಲಿ ಕ್ರಿಕೆಟ್ ಐಪಿಎಲ್ ಬೆಟ್ಟಿಂಗ್, ಮಟ್ಕಾ (ಓ.ಸಿ) ದಂಧೆಗಳಲ್ಲಿ ದಾಖಲಾದ ಪ್ರಕರಣಗಳು ಎಷ್ಟು; ಹೊರ ರಾಜ್ಯದ ಪೋಲಿಸರು ಕರ್ನಾಟಕದಲ್ಲಿ ಬಂದು ಕ್ರಿಕೆಟ್ ಐಪಿಎಲ್ ಬೆಟ್ಟಿಂಗ್, ಮಟ್ಕಾ (ಓಸಿ) ಪ್ರಕರಣಗಳನ್ನು ಪತ್ತೇ ಹಚ್ಚಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ಪ್ರಕರಣಗಳು ಮತ್ತು ರಾಜ್ಯದ ಇನ್ನಿತರ ಜಿಲ್ಲೆಗಳಲ್ಲಿ ಎಷ್ಟು ಪ್ರಕರಣಗಳು ಪತ್ತೆಯಾಗಿದೆ. ಕ್ರಿಕೆಟ್ ಐಪಿಎಲ್ ಬೆಟ್ಟಿಂಗ್ ಮಟ್ಕಾ (ಓ.ಸಿ)ದಂತಹ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಬೆಂಗಳೂರು ನಗರದಲ್ಲಿ ಹೆಚ್ಚಾಗುತ್ತಿರುವ ಟ್ರಾಫಿಕ್ ಸಮಸ್ಯೆ ಕುರಿತು

**ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨ (೬೨೭) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ದಿನೇ ದಿನೇ ಟ್ರಾಫಿಕ್ ತೊಂದರೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಟ್ರಾಫಿಕ್ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಆ) ಸದ್ಯ ಟ್ರಾಫಿಕ್ ವಿಭಾಗದಲ್ಲಿ ಮೂರು ವಲಯಗಳು ಮಾತ್ರವಿದ್ದು, ಹೊಸದಾಗಿ ನಾಲ್ಕನೇ ವಲಯ (ದಕ್ಷಿಣ ವಲಯ) ಮಾಡಲು ಸರ್ಕಾರ ಚಿಂತನೆ ನಡೆಸಿದೆಯೇ;

(ಇ) ನಗರದ ಅನಿರೀಕ್ಷಿತ ತಿರುವುಗಳಲ್ಲಿ ಟ್ರಾಫಿಕ್ ಪೋಲೀಸ್‌ರು ಏಕಾಏಕಿ ಅಡ್ಡ ಬಂದು ವಾಹನ ಸವಾರರ ಅಪಘಾತಗಳಿಗೆ ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು;

(ಈ) ಟ್ರಾಫಿಕ್ ವಿಭಾಗದ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಿದ್ದು, ಸಿಬ್ಬಂದಿಗಳು ನಿಯೋಜನೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ. ಹೊಸ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಯಾವಾಗ ಆರಂಭವಾಗಲಿದೆ?

## ಅಕ್ರಮವಾಗಿ ಗಾಂಜಾ ಮಾರಾಟವಾಗುತ್ತಿರುವುದರ ಕುರಿತು

**ಡಾ. ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) –**

೯೩ (೫೯೭) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಅಕ್ರಮ ಗಾಂಜಾ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾದ ಕೇಸ್‌ಗಳ ಸಂಖ್ಯೆ ಎಷ್ಟು;

(ಆ) ಈ ಸಂಬಂಧ ಎಷ್ಟು ಜನರನ್ನು ಬಂಧಿಸಲಾಗಿದೆ ಮತ್ತು ಬಂಧಿತರಿಂದ ವಶಕ್ಕೆ ಪಡೆದ ಗಾಂಜಾದ ಪ್ರಮಾಣ ಎಷ್ಟು;

(ಇ) ಕಲಬುರಗಿ ಮತ್ತು ಬೀದರ್ ಜಿಲ್ಲೆಯಲ್ಲಿ ಅಕ್ರಮ ಗಾಂಜಾ ದಂಧೆ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

## ಬಿ.ಎಂ.ಆರ್.ಸಿ.ಎಲ್. ಗುತ್ತಿಗೆ ನೌಕರರ ನೇಮಕಾತಿಯ ಬಗ್ಗೆ

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೪ (೬೮೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೇಮಕಾತಿಯಲ್ಲಿ ಇರುವ ವಿಧಗಳು ಯಾವುವು; ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್)ದಲ್ಲಿ ಸಿಬ್ಬಂದಿಗಳನ್ನು ಯಾವ ನೇಮಕಾತಿ ವಿಧಗಳಲ್ಲಿ ನೇಮಕಾತಿ ಮಾಡಿಕೊಂಡು ಕಾರ್ಯ ಸೇವೆ ಪಡೆದುಕೊಳ್ಳಲಾಗುತ್ತಿದೆ; (ವಿವರ ಒದಗಿಸುವುದು)

(ಆ) ಕಂಪನಿಯ ನೇರ ಗುತ್ತಿಗೆಯಡಿ ನೇಮಕಾತಿಗೂ ಮತ್ತು ಮಾನವ ಶಕ್ತಿ ಏಜೆನ್ಸಿಯಡಿ ನೇಮಕಾತಿಗೂ ಇರುವ ವ್ಯತ್ಯಾಸಗಳೇನು; (ವಿವರವಾದ ಮಾಹಿತಿ ಒದಗಿಸುವುದು)

(ಇ) ಕಂಪನಿ ನೇರಗುತ್ತಿಗೆಯಡಿ ಎಷ್ಟು ಜನ ಕಾರ್ಯನಿರ್ವಹಿಸುತ್ತಿದ್ದಾರೆ; ಹೆಸರು, ಹುದ್ದೆಯ ಪದನಾಮ, ಪಡೆಯುತ್ತಿರುವ ವೇತನ, ನೇಮಕಗೊಂಡ ದಿನಾಂಕದೊಂದಿಗೆ ವಿವರವಾದ ಮಾಹಿತಿ ಒದಗಿಸುವುದು;

(ಈ) ಇವರುಗಳನ್ನು ಪತ್ರಿಕಾ ಪ್ರಕಟಣೆಯ ಮೂಲಕ ನೇಮಕಾತಿ ಮಾಡಿಕೊಂಡಿರುವುದಾಗಿ ಸದನದಲ್ಲಿ ಉತ್ತರ ನೀಡಿರುವುದು ನಿಜವೇ;

(ಉ) ಹಾಗಿದ್ದರೆ, ಯಾವ ಯಾವ ದಿನಾಂಕಗಳಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಗಿದೆ; ಇದರ ಸಂಬಂಧ ಬಂದ ಅರ್ಜಿಗಳು ಎಷ್ಟು; ಎಷ್ಟು ಜನ ಆಯ್ಕೆಯಾಗಿದ್ದಾರೆ? (ವಿವರವಾಗಿ ಪತ್ರಿಕಾ ಪ್ರಕಟಣೆಯ ನಕಲುವಾರು ವಿವರವಾದ ಮಾಹಿತಿ ನೀಡುವುದು)

## ಎನ್.ಪಿ.ಎಸ್. ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೯೫ (೬೭೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಿನಾಂಕ ೦೧–೦೪–೨೦೦೬ರ ನಂತರ ನೇಮಕವಾಗಿರುವ ನೌಕರರ ಎನ್‌ಪಿಎಸ್ (NPS) ರದ್ದತಿಗೊಳಿಸಿ, ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಆ) ದಿನಾಂಕ ೦೧–೦೪–೨೦೦೬ರ ನಂತರ ನೇಮಕವಾಗಿರುವ ಎನ್‌ಪಿಎಸ್ ನೌಕರರನ್ನು ಮಲತಾಯಿಯಂತೆ ನಡೆಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮರಣ ಮತ್ತು ನಿವತ್ತಿ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ೬ನೇ ವೇತನ ಆಯೋಗದಲ್ಲಿ ನೀಡಿದ್ದರೂ ಸ್ಪಷ್ಟ ಸರ್ಕಾರಿ ಆದೇಶ, ಮಾರ್ಗಸೂಚಿಗಳಿಲ್ಲದೇ ಮರಣ ಮತ್ತು ನಿವೃತ್ತಿ ಹೊಂದಿದ ನೌಕರ ಮತ್ತು ಅವರ ಕುಟುಂಬಗಳು ಸದರಿ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## ಮಂಡ್ಯ ಜಿಲ್ಲೆಯ ನಾಲೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೯೬ (೬೭೨) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿನ ನೀರಾವರಿ ನಾಲೆಗಳು ದುರಸ್ತಿಯಾಗದೆ ದುಸ್ಥಿತಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ನಾಲೆಗಳು ದುಸ್ಥಿತಿಯಲ್ಲಿರುವುದರಿಂದ ಜಿಲ್ಲೆಯ ಕೊನೆ ಭಾಗದ ರೈತರಿಗೆ ನೀರು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ನಾಲೆಗಳನ್ನು ಆಧುನೀಕರಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಈ ನಾಲೆಗಳ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು)

(ಉ) ಈ ಅನುದಾನದಿಂದ ಎಷ್ಟು ನಾಲೆಗಳನ್ನು ಅಭಿವೃದ್ಧಿಪಡಿಸಲಾಗಿದೆ? (ವಿವರ ನೀಡುವುದು)

## ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರ ಸಭೆ ನಡೆಸುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೭ (೭೦೯) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರ್ವಜನಿಕರ ದೂರು ಮತ್ತು ಕುಂದು ಕೊರತೆಗಳನ್ನು ಆಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರ ಸಂಪರ್ಕ ಸಭೆಗಳನ್ನು ಪೊಲೀಸ್ ಅಧಿಕಾರಿಗಳು ನಡೆಸುತ್ತಿದ್ದಾರೆಯೇ;

(ಆ) ಕಳೆದ ಒಂದು ವರ್ಷದಲ್ಲಿ ಬೆಂಗಳೂರು ನಗರದ ಪೊಲೀಸ್ ಠಾಣೆಗಳಲ್ಲಿ ನಡೆಸಿರುವ ಸಭೆಗಳೆಷ್ಟು; ಸಭೆ ನಡೆಸಿರುವ ಅಧಿಕಾರಿಗಳು ಯಾರು ಯಾರು;

(ಇ) ಈ ಬಗ್ಗೆ ಮಾಹಿತಿಗಳನ್ನು ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಸಾರ್ವಜನಿಕರಿಗೆ ನೀಡಲಾಗುತ್ತಿದೆಯೇ; ಇದಕ್ಕಾಗಿ ಮಾಡಲಾಗುತ್ತಿರುವ ವ್ಯವಸ್ಥೆ ಏನು?

## ನವೀಕರಿಸಬಹುದಾದ ಇಂಧನ ಉತ್ಪಾದನೆಗಳ ಉತ್ತೇಜನ ನೀಡುವ ಬಗ್ಗೆ

**ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) –**

೯೮ (೭೭೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇತ್ತೀಚೆಗೆ ಇಂಧನ ಇಲಾಖೆ Wheeling & Banking ಬಗ್ಗೆ ಹೊಸ ಸುತ್ತೋಲೆಯನ್ನು ಹೊರಡಿಸಿ Banking ವಿಷಯವನ್ನು ತೆಗೆದಿರುವುದು ನಿಜವೇ;

(ಆ) ಪಕ್ಕದ ರಾಜ್ಯಗಳಲ್ಲಿ Wheeling & Banking Facilities ಇದ್ದು, ನಮ್ಮ ರಾಜ್ಯದಲ್ಲಿ ಮಾತ್ರ ಇದನ್ನು ತೆಗೆಯಲು ಕಾರಣವೇನು; ನಮ್ಮ ರಾಜ್ಯದ

ಈ ಸುತ್ತೋಲೆ Renewable Energy Companyಗಳಿಗೆ ತುಂಬಾ ತೊಂದರೆಯಾಗುತ್ತಿರುವುದಲ್ಲದೇ ಬಂಡವಾಳ ಹೂಡುವುವವರ ಸಂಖ್ಯೆಯು ಇಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಕೇಂದ್ರ ಸರ್ಕಾರ Renewable Energy ಗಳಿಗೆ ಒತ್ತು ನೀಡಿದ್ದು ರಾಜ್ಯ ಸರ್ಕಾರಗಳಿಗೆ ಇದನ್ನು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿ ಮಾಡಲು ಸುತ್ತೋಲೆಯಲ್ಲಿ ತಿಳಿಸಿದ್ದರೂ ಸಹ ಕಳೆದ ಸುಮಾರು ೫ ವರ್ಷಗಳಿಂದ ಸರ್ಕಾರವು ಯಾವುದೇ (PPA) ಮಾಡದೇ Renewable Energyಗೆ (Wind) ಉತ್ತೇಜನ ನೀಡದಿರಲು ಕಾರಣವೇನು;

(ಈ) ಕಡಿಮೆ ಬೆಲೆಯ ಹಾಗೂ ಪರಿಸರ ಹಾನಿ ಮಾಡದ ಈ ವಿದ್ಯುತ್ ಖರೀದಿಸಲು ಸರ್ಕಾರ ಮನಸ್ಸು ಮಾಡದಿರಲು ಕಾರಣಗಳೇನು;

(ಉ) ಕರ್ನಾಟಕ ರಾಜ್ಯಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ HYBRID Project (Solar + Wind) ವಿದ್ಯುತ್ ಖರೀದಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ, ಈ ನವೀಕರಿಸಿದ ಇಂಧನ ಉತ್ಪಾದಿಸಲು ಉತ್ತೇಜನ ನೀಡಲು ಸರ್ಕಾರ ಯಾವಾಗ ಕ್ರಮ ವಹಿಸಲಾಗುವುದು?

## ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಏರಿಕೆ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) –**

೯೯ (೭೦೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಡೀಸೆಲ್ ಮತ್ತು ಪೆಟ್ರೋಲ್‌ನಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಬರುತ್ತಿರುವ ತೆರಿಗೆ ಎಷ್ಟು; (ವಿವರ ನೀಡುವುದು)

(ಆ) ಕಳೆದ ಎರಡು ತಿಂಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ದಿನ ಏರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ದಿನ ಏರಿಕೆಯಾಗುತ್ತಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿದ್ದು, ಬೆಲೆ ಇಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಸ್ವಚ್ಛ ಬೆಂಗಳೂರು ಕುರಿತು

**ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) –**

೧೦೦ (೬೦೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಗರವನ್ನು ಸ್ವಚ್ಛಗೊಳಿಸಲು ಇಲ್ಲಿಯವರೆವಿಗೂ ಎಷ್ಟು ಯಂತ್ರಗಳನ್ನು ಯಾವ ಯಾವ ದಿನಾಂಕಗಳಲ್ಲಿ ಖರೀದಿಸಲಾಗಿದೆ; ಖರೀದಿಸಲು ತಗಲಿರುವ ವೆಚ್ಚ ಎಷ್ಟು; ಮಾಸಿಕ ನಿರ್ವಹಣೆಗೆ ತಗಲುವ ವೆಚ್ಚ ಎಷ್ಟು; (ಪೂರ್ಣ ವಿವರ ನೀಡುವುದು)

(ಆ) ಈ ಯಂತ್ರಗಳನ್ನು ಬಳಸಿ ನಗರದ ರಸ್ತೆಗಳನ್ನು ಸ್ವಚ್ಛಗೊಳಿಸುವ ಉದ್ದೇಶ ಸಂಪೂರ್ಣವಾಗಿ ಈಡೇರಿದೆಯೇ?

## ತಮಿಳುನಾಡು ರಾಜ್ಯವು ಅಕ್ರಮವಾಗಿ ನದಿ–ಜೋಡಣೆ ಯೋಜನೆಯನ್ನು ಕೈಗೆತ್ತಿಕೊಂಡಿರುವ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೧ (೬೩೧) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತಮಿಳುನಾಡು ನಿಗದಿಗಿಂತ ಹೆಚ್ಚು ನೀರನ್ನು ಅಕ್ರಮವಾಗಿ ಬಳಸಿಕೊಂಡು ನದಿ ಜೋಡಣೆ ಯೋಜನೆಯನ್ನು ಪ್ರಾರಂಭ ಮಾಡಲು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಇದನ್ನು ತಕ್ಷಣ ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾನೂನು ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

## ವಿದ್ಯುತ್ ವಿತರಣಾ ಕಂಪನಿಗಳ ಖಾಸಗೀಕರಣದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೨ (೬೮೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಅಧೀನದ ವಿವಿಧ ವಿದ್ಯುತ್ ವಿತರಣಾ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಸಂಬಂಧ ಕೇಂದ್ರ ಸರ್ಕಾರವು ಕರಡು ನಿಯಮಾವಳಿಯನ್ನು ರೂಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ಕರಡು ಪ್ರತಿಯನ್ನು ಒದಗಿಸುವುದು;

(ಆ) ಈ ಖಾಸಗೀಕರಣವನ್ನು ವಿರೋಧಿಸಿ ಇಲಾಖೆಯ ನೌಕರರ ಸಂಘಟನೆಗಳು ಮತ್ತು ಸಂಘ ಸಂಸ್ಥೆಗಳು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಂಘಟಣೆಗಳು ಆಕ್ಷೇಪಿಸಿದ ಕಾರಣಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಖಾಸಗೀಕರಣದ ಕುರಿತು ಕೇಂದ್ರ ಸರ್ಕಾರಕ್ಕೆ ಇಲಾಖೆಯಿಂದ ಅಭಿಪ್ರಾಯ ಸಲ್ಲಿಸಿ ಪತ್ರವನ್ನು ಸಲ್ಲಿಸಲಾಗಿದೆಯೇ; (ಪ್ರತಿಯನ್ನು ಒದಗಿಸುವುದು ಇಲ್ಲವಾದಲ್ಲಿ ಕಾರಣವೇನು)

(ಈ) ಖಾಸಗೀಕರಣದಿಂದ ಬಡಕುಟುಂಬಗಳಿಗೆ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ, ರೈತರ ಕೃಷಿ ಪಂಪುಗಳಿಗೆ ಉಚಿತ ವಿದ್ಯುತ್ ಕಲ್ಪಿಸುವಿಕೆಯನ್ನು ಮುಂದುವರಿಕೆ ಖಾತ್ರಿ ಪಡಿಸಲು ಸರ್ಕಾರದ ಕ್ರಮವೇನು?

## ಸಚಿವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವಿವರ

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೦೩ (೬೬೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದ ಸಚಿವಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಇಲಾಖಾವಾರು/ವರ್ಗಾವಾರು/ ಪದನಾಮವಾರು ವಿವರಗಳನ್ನು ನೀಡುವುದು)

(ಆ) ಈ ಅಧಿಕಾರಿ/ಸಿಬ್ಬಂದಿಗಳ ವರ್ಗಾವಣೆ ಪ್ರಕ್ರಿಯೆಗೆ ಸರ್ಕಾರ ರೂಪಿಸಿರುವ ಮಾನದಂಡಗಳೇನು; (ವಿವರ ನೀಡುವುದು)

(ಇ) ಈ ಅಧಿಕಾರಿಗಳು/ಸಿಬ್ಬಂದಿಗಳಿಗೆ ಕೌನ್ಸಿಲಿಂಗ್ ಮುಖಾಂತರ ವರ್ಗಾವಣೆ ಪ್ರಕ್ರಿಯೆ ಜಾರಿಗೊಳಿಸಲು ಸರ್ಕಾರ ಚಿಂತಿಸಿದೆಯೇ;

(ಈ) ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೊಳಿಸಲಾಗುವುದು?

## ಜಿ.ಎಸ್.ಟಿ. ಕೊರತೆ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –**

೧೦೪ (೬೬೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಿಎಸ್‌ಟಿ ತೆರಿಗೆ ವಸೂಲಾತಿಯಲ್ಲಿ ಕೊರತೆ ಆಗಿರುವ ಹಿನ್ನೆಲೆಯಲ್ಲಿ ಜಿಎಸ್‌ಟಿ ಪರಿಹಾರ ರೂಪದಲ್ಲಿ ೨೦೧೭ ರಿಂದ ಇಲ್ಲಿಯವರೆಗೂ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ನೀಡಬೇಕಾಗಿರುವ ಪರಿಹಾರವೆಷ್ಟು; (ವರ್ಷವಾರು ನೀಡಬೇಕಾಗಿರುವ ಪರಿಹಾರ, ಬಿಡುಗಡೆ ಮಾಡಿರುವ ಪರಿಹಾರ ಮತ್ತು ಉಳಿಕೆ ಮೊತ್ತದ ವಿವರ ನೀಡುವುದು)

(ಆ) ವರ್ಷಾವಾರು ಜಿಎಸ್‌ಟಿ ತೆರಿಗೆ ವಸೂಲಾತಿಯಲ್ಲಿ ರಾಜ್ಯ ಸರ್ಕಾರ ಕೊರತೆ ಅನುಭವಿಸುತ್ತಿರುವುದು ಮತ್ತು ಇದರಿಂದ ಕೇಂದ್ರ ಸರ್ಕಾರದಿಂದ ಪರಿಹಾರ ರೂಪದಲ್ಲಿ ನೀಡಬೇಕಾಗಿರುವ ಮೊತ್ತ ಏರಿಕೆ ಆಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಈ ಕೊರತೆಯನ್ನು ತುಂಬಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಒಂದು ವೇಳೆ ಕೇಂದ್ರ ಸರ್ಕಾರ ಜಿಎಸ್‌ಟಿ ತೆರಿಗೆ ಸಂಗ್ರಹ ಕೊರತೆಯನ್ನು ಜಿಎಸ್‌ಟಿ ಸೆಸ್ ಕಾಯ್ದೆ ಅಡಿಯಲ್ಲಿ ಸರಿದೂಗಿಸಲು ಅಸಾಧ್ಯವಾದಲ್ಲಿ ಕೇಂದ್ರ ಸರ್ಕಾರ ಪರ್ಯಾಯವಾಗಿ ರೂಪಿಸಿರುವ ಯೋಜನೆಯೇನು ಮತ್ತು ಈ ಪರ್ಯಾಯ ಯೋಜನೆ ಹೊರತುಪಡಿಸಿ, ಈ ಕೊರತೆಯನ್ನು ತುಂಬಿಸಲು ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಗಳಾವುವು;

(ಈ) ಹಿಂದಿನ ಆಯ–ವ್ಯಯದಲ್ಲಿ ಅಳವಡಿಕೆಯಾಗಿ ಮುಂದುವರೆದ ಮತ್ತು ಮುಂದಿನ ಆಯ–ವ್ಯಯಗಳಲ್ಲಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಕರ್ಯಗಳಿಗೆ ಅನುದಾನವನ್ನು ಯಾವ ರೀತಿ ಸಂಪನ್ಮೂಲಗಳಿಂದ ಕ್ರೋಢೀಕರಿಸಲಾಗುವುದು? (ವಿವರ ಒದಗಿಸುವುದು)

## ಕೊಡಗು ಜಿಲ್ಲೆಯಲ್ಲಿನ ಕಾಫಿ ಬೆಳೆಗಾರರು ಉಪಯೋಗಿಸುವ ಪಂಪ್‌ಸೆಟ್‌ಗಳಿಗೆ ಅವು ಬಳಕೆಯಾದ ಅವಧಿಗೆ ಮಾತ್ರ ಶುಲ್ಕ ವಿಧಿಸುವ ಬಗ್ಗೆ

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೫ (೭೦೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿನ ಕಾಫಿ ಬೆಳೆಗಾರರು ತಮ್ಮ ಕಾಫಿ ಬೆಳೆಗೆ ಸ್ಪ್ರಿಂಕ್ಲರ್ ಮಾಡಲು ವರ್ಷದಲ್ಲಿ ೩ ತಿಂಗಳು ಮಾತ್ರ ಉಪಯೋಗಿಸುವ ಪಂಪ್‌ಸೆಟ್‌ಗಳಿಗೆ, ಇಡೀ ವರ್ಷಕ್ಕೆ ಅನ್ವಯಿಸುವಂತೆ ಕನಿಷ್ಟ ದರ ನಿಗದಿ ಮಾಡಿ ಹಣ ವಸೂಲಿ ಮಾಡುತ್ತಿರುವುದರಿಂದ ಈಗಾಗಲೇ ನಷ್ಟದಲ್ಲಿರುವ ಕಾಫಿ ಬೆಳೆಗಾರರು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಪಂಪ್ ಸೆಟ್‌ಗಳಿಗೆ ಅವು ವರ್ಷದಲ್ಲಿ ಬಳಕೆಯಾಗುವ ೩ ತಿಂಗಳುಗಳಿಗೆ ಮಾತ್ರ ಅನ್ವಯಿಸುವಂತೆ ಕನಿಷ್ಟ ದರ ನಿಗದಿ ಮಾಡಿ ವಸೂಲಿ ಮಾಡಲು ಸರ್ಕಾರ ಈ ಕೂಡಲೇ ಕ್ರಮವಹಿಸುವುದೇ;

(ಇ) ಕಳೆದ ಹಲವಾರು ವರ್ಷಗಳಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದಿಂದ ಕಾಫಿ ಬೆಳೆ ಹಾಳಾಗಿರುವುದು ಮತ್ತು ಸತತ ಬೆಲೆ ಕುಸಿತದಿಂದಾಗಿ ಕೊಡಗಿನ ಕಾಫಿ ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದನ್ನು ಪರಿಗಣಿಸಿ, ಕೊಡಗು ಜಿಲ್ಲೆಯಲ್ಲಿನ ಕಾಫಿ ಬೆಳೆಗಾರರು ಬಳಸುವ ೧೦ ಅಶ್ವಶಕ್ತಿವರೆಗಿನ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಲು ಸರ್ಕಾರ ಈ ಕೂಡಲೇ ಕ್ರಮವಹಿಸುವುದೇ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**List of Questions**
**for Oral Answers**

**Total No. of**
**Questions - 15**

# LIST - 01

# KARNATAKA LEGISLATIVE COUNCIL

## ONE HUNDRED AND FORTY THIRD SESSION

## (Adjourned Meetings)

## Thursday, the 04th March, 2021

---

**GROUP - IV**

1. Chief Minister
2. Minister for Home and Law, Parliamentary Affairs and Legislation
3. Minister for Minor Irrigation
4. Minister for Water Resources
5. Minister for Excise
6. Minister for Youth Empowerment and Sports and Planning

---

**THEFT CASES IN KALABURAGI DISTRICT**

**Sri Sunil Vallyapur(Elected by Legislative Assembly) -**

91(624) Will the Minister for Home and Law, Parliamentary Affairs and Legislation be pleased to state:-

a) the number of theft cases took place in Kalaburagi district for the last 03 years; the particulars thereof; (talukwise complete information be furnished)

b) out of which, the number of cases in which thieves have been traced out and arrested; the number of cases in which stolen items have been returned;

c) the reasons for not tracing the thieves even after elapse of several months; the number of days in which the thieves would be traced out;

d) the number of cases registered about cricket IPL betting, matka (O.C) mafia in Karnataka; whether it has come to the notice of the State Government that the police of other states have come to Karnataka and traced out cricket IPL betting, matka (O.C) cases in Karnataka;

e) if so, the number of cases traced out in Kalaburagi district and other districts of the State; the actions taken by the Government to curb illegal activities like cricket IPL betting, matka (O.C) mafia?

**INCREASING TRAFFIC MENACE IN BENGALURU CITY**

**Sri H.M. Ramesha Gowda (Elected by Legislative Assembly)-**

92(627) Will the Minister for Home and Law, Parliamentary Affairs and Legislation be pleased to state:-

a) whether it has come to the notice of the Government that traffic problem is being increased day by day in Bengaluru city; if so, the steps taken by the Government to control the traffic;

b) since there are only three divisions in the traffic wing at present;whether the Government has contemplated to establish fourth division (south division) newly;

c) whether it has come to the notice of the Government that the traffic police used to rush across the vehicles all of a sudden in unexpected crossings and stop the vehicles for checking and it leads to accidents of motor riders; if so, the steps taken by the Government in this regard;

d) the measures that have been taken to deploy the staff since there is shortage of staff in traffic wing; the date on which recruitment process of new staff would be commenced?

## ILLEGAL SALE OF GANJA

**Dr. Chandrashekar B. Patil (Graduates' Constituency) -**

93 (597) Will the Minister for Home and Law, Parliamentary Affairs and Legislation be pleased to state:-

a) the number of cases registered about illegal sale of ganja in Kalaburagi and Bidar districts during the last year;

b) the number of persons arrested in this regard and the quantum of ganja that has been seized from them;

c) the measures taken by the Government to curb the illegal ganjamafia in Kalaburagi and Bidar districts?

## RECRUITMENT OF CONTRACT BASIS EMPLOYEES IN B.M.R.C.L.

**Sri Kantharaj(BML)(Local Authorities Constituency) -**

94(684) Will the Chief Minister be pleased to state:-

a) the particulars on different types of recruitment; the mode of recruitment in which staff have been getting recruited and inducted into service by the Bengaluru Metro Rail Corporation Limited (BMRCL); (details be furnished)

b) the differences between recruitment under direct contract of the company and recruitment under Human Resource Agency; (detailed information be furnished)

c) the number of employees working under direct contract of the company; the detailed information alongwith name, designation of the post, salary, date of appointment be furnished;

d) whether it is true that the reply has been given in the House that these employees have been appointed through press notification;

e) if so, the particulars of dates on which press notification has been issued; the number of applications received in this regard; the number of candidates selected? (a detailed information along with true copy of the press notification be furnished)

## NEW PENSION SCHEME

**Sri S.L. Bojegowda (Teachers' Constituency) -**

95(674) Will the Chief Minister be pleased to state:-

a) the steps taken by the Government to revoke New Pension Scheme of employees who recruited after 01.04.2006 and implement the old pension scheme;

b) whether it has come to the notice of the Government that the employees recruited after 01.04.2006 are being treated with step motherly attitude; whether the Government is aware of the fact that the deceased and retired employees and their families are deprived of Death-cum-Retirement Gratuity (DCRG) and Family Pension benefits as there is no clear Government order and guidelines of the Government eventhough such facilities have been provided in 6th Pay Commission?

## DEVELOPMENT OF CANALS IN MANDYA DISTRICT

**Sri K.T.Srikantegowda (Graduates' Constituency) -**

96 (672) Will the Minister for Water Resources be pleased to state:-

a) whether it has come to the notice of the Government that irrigation canals of Mandya district are in dilapitated condition without repair;

b) whether the Government is aware of the fact that water is not reaching to the tail end farmers of the district due to bad condition of the canals;

c) if so, the measures taken by the Government for modernization of the said canals;

d) the grant released for the development of said canals for the last 3 years; (details be furnished)

e) the number of canals developed out of the said grant? (details be furnished)

## CONDUCTING PUBLIC MEETING IN THE POLICE STATIONS

**Sri R. Dharmasena (Local Authorities Constituency) -**

97 (709) Will the Minister for Home and Law, Parliamentary Affairs and Legislation be pleased to state:-

a) whether police officers are conducting public meetings in the police stations for hearing the complaints and grievances and to take suitable actions for redressal of the same;

b) the number of meetings conducted inpolice stations of Bengaluru city during the last one year; the names of officers who conducted the meetings;

c) whether information in this regard is being provided to the public through newspapers and electronic media (T.V.); the particulars of arrangement being made therefor?

## ENCOURAGEMENT FOR RENEWABLE ENERGY

**Sri B.M. Farooq(Elected by Legislative Assembly) -**

98(779) Will the Chief Minister be pleased to state:-

a) whether it is true that the energy department has issued a new circular recently about wheeling and Banking and removed the Banking subject;

b) the reason for removing the same in our State; though wheeling and Banking facilities are existing in the neighbouring states; whether it has come to the notice of the Government that this circular of our State is not only posing very difficulty to the Renewable Energy companies but also decreasing the number of investors;

c) the reason for not encouraging the Renewable Energy (Wind) without doing any P.P.A by the Government for around last 5 years even though the Central Government has focused on Renewable Energy and instructed the State Governments through the circular to develop the renewable energy in large scale;

d) the reasons before the Government for not considering the purchase of said electricity which is affordable and eco-friendly;

e) whether a proposal for purchasing HYBRID project (solar+wind)electricity from the Renewable energy sources in Karnataka State is before the Government; if not, the date on which the Government would take measure to encourage for generation of this Renewable energy?

**INCREASE OF DIESEL AND PETROL PRICE**

**Sri Prakash K. Rathod (Nominated) -**

99 (703) Will the Chief Minister be pleased to state:-

a) the amount of tax being collected by the State and Central Governments on diesel and petrol; (details be furnished)

b) whether it has come to the notice of the Government that the prices of petrol and diesel are increasing day by day for the last two months;

c) the steps taken by the Government to reduce the price of petrol and diesel since public are facing hardship due to increase in the prices of petrol and diesel on daily basis?

**CLEAN CITY BENGALURU**

**Sri A. Devegowda (Graduates' Constituency) -**

100 (606) Will the Chief Minister be pleased to state:-

a) the number of machines purchased by the Bruhath Bengaluru Mahanagara Palike on various dates to clean the city so far; the expenditure incurred for purchasing the same; the expenditure incurred to be for monthly maintainence; (complete details be furnished)

b) whether the purpose is served completely to clean the roads of the city by utilising the said machines?

**RIVER LINKING PROJECT UNDERTAKEN BY TAMILNADU ILLEGALLY**

**Sri M. Narayanaswamy (Local Authorities Constituency) -**

101 (631) Will the Minister for Water Resources be pleased to state:-

a) whether it has come to the notice of the Government that Tamilnadu has planned to launch the river linking project by using more water than its share illegally;

b) if so, the legal actions that have been taken and that would be taken by the Government to stop the project immediately; (complete details be furnished)

**PRIVATISATION OF POWER TRANSMISSION COMPANIES**

**Sri K. Prathapachandra Shetty (Local Authorities Constituency) -**

102(689) Will the Chief Minister be pleased to state:-

a) whether it has come to the notice of the Government that the Central Government has formulated draft rules in connection with privatisation of various power transmission companies under the energy department of the Karnataka Government; if so, the draft copy be furnished;

b) whether the Government is aware of the fact that the employees associations and organisations of the department are opposing the said privatisation; the reasons for objections raised by the said organisations; (complete information be furnished)

c) whether the department has written a letter alongwith its opinion to the Central Government about the said privatisation; (the copy be furnished); if not, the reasons therefor;

d) the measures of the Government to ensure that the privatisation move would not affect the continuation of free electricity supply to Bhagya Jyothi, Kutera Jyothi connections to poor families and to the agricultural pumpset of the farmers?

## OFFICERS/STAFF WORKING IN SECRETARIATS

**Dr. Y.A. Narayanaswamy (Teachers' Constituency) -**

103(660) Will the Chief Minister be pleased to state:-

a) the number of officers/ staff working in the Secretariats of Karnataka State; (departmentwise/cadrewise/ designationwise details be furnished)

b) the yardsticks framed by the Government for transfer process of the said officers/staff; (details be furnished)

c) whether the Government intends to implement transfer process of the said officers/staff through counselling;

d) if so, the date on which it would be implemented?

## SHORTFALL IN G.S.T.

**Sri K.A. Thippeswamy (Nominated) -**

104 (666) Will the Chief Minister be pleased to state:-

a) the amount of compensation payable by the Central Government to Karnataka State in the form of GST compensation from 2017 to till date in view of shortfallin collection of GST; (details of yearwise compensation payable, compensation released and balance amount of GST be furnished)

b) whether it is true that the State Government is facing shortfall in collection of yearwise GST and thereby the amount payable by the Central Government in the form of compensation is increasing; if so, the steps taken by the Central and State Governments to overcome this shortfall; (details be furnished)

c) the particulars of the alternative plan chalked out by the Central Government in case if it is not possible to the Central Government to make up for shortfall in GST collection under GST cess Act and the particulars of plans evolved by the State Government to overcome this shortfall;

d) the types of resources from which the grants would be consolidated for the infrastructure projects provided and continued in the previous budget and to be provided in the upcoming budget? (details be furnished)

## IMPOSING ELECTRICITY CHARGE TO PUMPSETS OF COFFEE PLANTERS ONLY FOR THEIR PERIOD OF UTILIZATION IN KODAGU DISTRICT

**Smt.S.VeenaAchaiah(Elected by Legislative Assembly) -**

105(701) Will the Chief Minister be pleased to state:-

a) whether it has come to the notice of the Government that the coffee planters in Kodagu district who are already in distress are facing more financial crisis due to cancellation of electricity charges by fixing minimum rate as applicable to whole year for the pumpsets of coffee planters which they only used for 3 months in a year to sprinkle their coffee crops;

b) if so, whether the Government would take immediate steps to collect the electricity charges by fixing minimum rate as applicable to 3 months for which said pumpsets are used in a year;

c) whether the Government would take immediate action to supply electricity at free of cost to the pumpsets upto 10 horsepowers used by the coffee planters of Kodagu district by considering the damage of coffee crop due to naturaldisaster took place in the past several years and severe financial crisis being faced by the coffee planters of Kodagu due to continuous decline in coffee price?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD-830 - Copies